E-mail : academic.pg@kud.ac.in
Website: kud.ac.in
Phone: (0836) 2215270

ಕರ್ನಾಟಕ ವಿಶ್ವವಿದ್ಯಾಲಯ,
ಪಾವಟೆನಗರ, ಧಾರವಾಡ -580003

# KARNATAK UNIVERSITY,

Pavate Nagar, Dharwad-580 003
'A' Grade NAAC Accredited
University Potential for Excellence

Academic (PG/Ph.D) Section
ವಿದ್ಯಾಮಂಡಳ (ಪಿಜಿ/ಪಿಎಚ್.ಡಿ)ವಿಭಾಗ

**No.KU/Aca/P.G./Ph.D/2023-24** / 11 **Date:** 19-05-2023

## ಸುತ್ತೋಲೆ

**ವಿಷಯ:2022-23 ನೇ ಸಾಲಿನ ಸ್ನಾತಕೋತ್ತರ II, IV ಮತ್ತು VI ನೇ ಸೆಮೆಸ್ಟರಗಳಿಗೆ ಪ್ರವೇಶ ಪ್ರಕ್ರಿಯೆ ಜರುಗಿಸುವ ಕುರಿತು.**

**ಉಲ್ಲೇಖ:1. ಕ.ವಿ.ವಿ/ವಿಮಂ(ಎಸ್.&ಟಿ)/ಎಸ್ಎಸ್ಎಲ್-421/ಪಿ.ಜಿ.ಕೋರ್ಸ/ಸಿಇ/2023-24/79 ದಿ:17.05.2023**

**2. ಮಾನ್ಯ ಕುಲಪತಿಗಳ ಆದೇಶ ದಿನಾಂಕ:** 19-05-2023

ಕವಿವಿಯ ಎಲ್ಲ ಸ್ನಾತಕೋತ್ತರ ವಿಭಾಗಗಳು /ಕೇಂದ್ರಗಳು /ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ (ಪಿಜಿ)ಆಡಳಿತಾಧಿಕಾರಿಗಳು/ ಅಧ್ಯಕ್ಷರುಗಳು/ ನಿರ್ದೇಶಕರು/ ಸಂಯೋಜಕರು/ ಪ್ರಾಚಾರ್ಯರುಗಳ ಗಮನಕ್ಕೆ ತರಬಯಸುವುದೇನೆಂದರೆ, 2022-23ನೇ ಸಾಲಿನ ಎಲ್ಲ ಸ್ನಾತಕೋತ್ತರ II, IV ಮತ್ತು VIನೇ ಸೆಮೆಸ್ಟರಗಳ ಪ್ರವೇಶ ಪ್ರಕ್ರಿಯೆಯನ್ನು ಈ ಕೆಳಗಿನ ವೇಳಾಪಟ್ಟಿಯಂತೆ ಜರುಗಿಸಲು ತಿಳಿಸಲಾಗಿದೆ.

**2022-23ನೇ ಸಾಲಿನ ಎಲ್ಲ ಸ್ನಾತಕೋತ್ತರ II, IV ಮತ್ತು VI ನೇ ಸೆಮೆಸ್ಟರ್‌ಗಳ ಪ್ರವೇಶ ಪ್ರಕ್ರಿಯೆಯ ವಿವರ**

| Semester | Re-opening Date | Last date for admission | Submission of Admission List and Fee receipts to the Academic Section, KUD |
|---|---|---|---|
| PG II, IV & VI Sem | 01.06.2023 | 17.06.2023 | 24.06.2023 |

ಮುಂದುವರೆದು, ಸದರಿ ಪ್ರವೇಶ (Processing) ಅರ್ಜಿ ಸಂಸ್ಕರಣಾ ಶುಲ್ಕ ರೂ.**250/-(125/-for SC/ST/Cat-1)**ಗಳನ್ನು SBI Collect ಮುಖಾಂತರ ಶುಲ್ಕ ಭರಿಸಿದ ರಸೀದಿಯನ್ನು ವಿದ್ಯಾರ್ಥಿಗಳಿಂದ ಪಡೆಯುವುದು. ಮುಂದುವರೆದು, ಸ್ನಾತಕೋತ್ತರ I, III ಮತ್ತು Vನೇ ಸೆಮೆಸ್ಟರ್‌ನ ವಿದ್ಯಾರ್ಥಿಗಳಿಗೆ ವಿಭಾಗದ ಮುಖ್ಯಸ್ಥರು UUCMS ನಲ್ಲಿ promote ಎಂದು ನಮೂದಿಸಿ ನಂತರ **II, IV ಮತ್ತು VI ನೇ ಸೆಮೆಸ್ಟರಗಳಿಗೆ** ಈ ಕೆಳಗಿನ ವಿವರಗಳನ್ನು ಅನುಸರಿಸುವುದರೊಂದಿಗೆ ಪ್ರವೇಶ ಪಡೆದುಕೊಳ್ಳುವುದು.

**ಎಲ್ಲ ಸ್ನಾತಕೋತ್ತರ II, IV ಮತ್ತು VI ನೇ ಸೆಮೆಸ್ಟರ್‌ಗಳ ವಿದ್ಯಾರ್ಥಿಗಳಿಗೆ ಈ ಕೆಳಕಾಣಿಸಿದ ಅಂಶಗಳನ್ನು ವಿಶೇಷ ಗಮನಹರಿಸಿ ಪ್ರವೇಶ ನೀಡಬೇಕು.**

1. ಸ್ನಾತಕೋತ್ತರ **II, IV ಮತ್ತು VI ನೇ** ಸೆಮೆಸ್ಟರ್‌ಗಳ ವಿದ್ಯಾರ್ಥಿಗಳಿಗೆ ಯಾವುದೇ ವರ್ಗಾವಣೆ (Transfer)ಗೆ ಅವಕಾಶವಿರುವುದಿಲ್ಲ.
2. ಸ್ನಾತಕೋತ್ತರ I, III ಮತ್ತು Vನೇ ಸೆಮೆಸ್ಟರ್‌ಗೆ ಪ್ರವೇಶ ಪಡೆಯುವ ಸಮಯದಲ್ಲಿ ಶುಲ್ಕವನ್ನು ಕಂತುಗಳಲ್ಲಿ ಭರಿಸಲು ಅನುಮತಿ ನೀಡಿದ ವಿದ್ಯಾರ್ಥಿಗಳಿಂದ ಬಾಕಿ ಶುಲ್ಕವನ್ನು ಕಡ್ಡಾಯವಾಗಿ **II, IV ಮತ್ತು VI ನೇ** ಸೆಮೆಸ್ಟರ್ ಪ್ರವೇಶ ಸಮಯದಲ್ಲಿ ಭರಿಸಿಕೊಳ್ಳಬೇಕು.

II & IV sem Note and letter -2022-23

P.T.O

3. **ಪರೀಕ್ಷಾ ಶುಲ್ಕ:** ಪರೀಕ್ಷಾ ವಿಭಾಗದಿಂದ ಹೊರಡಿಸಲಾದ ಅಧಿಸೂಚನೆ ಪ್ರಕಾರ ಪರೀಕ್ಷಾ ಶುಲ್ಕಗಳನ್ನು ಭರಿಸುವುದು.

4. SC/ST/Cat-I/IIA/IIB/IIIA/IIIB ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ III ಮತ್ತು Vನೇ ಸೆಮೆಸ್ಟರ್‌ಗೆ ಪ್ರವೇಶ ಪಡೆಯುವ ಸಮಯದಲ್ಲಿ ವಿವಿಧ ಶುಲ್ಕಗಳನ್ನು (ಪ್ರವೇಶ/ಪರೀಕ್ಷೆ) ವಿನಾಯಿತಿ ನೀಡಲಾಗಿರುತ್ತದೆ. ಸದರಿ ವಿನಾಯತಿ ನೀಡಿದ ಶುಲ್ಕಗಳು ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ /ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಇಲಾಖೆಯಿಂದ ಮಂಜೂರಾದ ಶಿಷ್ಯವೇತನದ ಮೊತ್ತವು ಕವಿವಿಗೆ ಬರದೇ ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮೆಯಾಗಿರುವುದರಿಂದ ವಿನಾಯತಿ ನೀಡಿದ ಶುಲ್ಕಗಳನ್ನು ಸದರಿ ವಿದ್ಯಾರ್ಥಿಗಳಿಂದ ಕಡ್ಡಾಯವಾಗಿ **IV ಮತ್ತು VI ನೇ** ಸೆಮೆಸ್ಟರ್ ಪ್ರವೇಶ ಸಂದರ್ಭದಲ್ಲಿ ಭರಿಸಿಕೊಳ್ಳಬೇಕು.

ಮೇಲ್ಕಾಣಿಸಿದ ಅಂಶಗಳನ್ನು ಗಮನಿಸಿ ಎಲ್ಲ ಸ್ನಾತಕೋತ್ತರ **II, IV ಮತ್ತು VI ನೇ** ಸೆಮೆಸ್ಟರಗಳಿಗೆ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆಯನ್ನು **ದಿನಾಂಕ: 17.06.2023** ರ ಒಳಗಾಗಿ ಪೂರ್ಣಗೊಳಿಸಲು ಈ ಮೂಲಕ ತಿಳಿಸಲಾಗಿದೆ.

I/c 19.5.23
**ಕುಲಸಚಿವರು**

**ಗೆ,**

1. **ಅಧ್ಯಕ್ಷರು/ಸಂಯೋಜಕರು/ನಿರ್ದೇಶಕರು ಎಲ್ಲ ಸ್ನಾತಕೋತ್ತರ ವಿಭಾಗಗಳು, ಕ.ವಿ.ವಿ ಧಾರವಾಡ.**
2. **ಅಧ್ಯಕ್ಷರು, ಎಂ.ಎಡ್. ಮತ್ತು ಕಾನೂನು ಅಧ್ಯಯನ ವಿಭಾಗ, ಧಾರವಾಡ**
3. **ಆಡಳಿತಾಧಿಕಾರಿಗಳು, ಕ.ವಿ.ವಿ. ಸ್ನಾತಕೋತ್ತರ ಕೇಂದ್ರ, ಗದಗ/ಕಾರವಾರ/ಹಾವೇರಿ.**
4. **ಪ್ರಾಚಾರ್ಯರು, ಕರ್ನಾಟಕ ಕಲಾ/ವಾಣಿಜ್ಯ/ವಿಜ್ಞಾನ/ ಮಹಾವಿದ್ಯಾಲಯ, ಧಾರವಾಡ(ಪಿಜಿ ಕೋರ್ಸುಗಳು).**
5. **ಸಂಯೋಜಕರು, ಎಂ.ಟಿ.ಟಿ.ಎಂ. ಅಧ್ಯಯನ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.**
6. **ಪ್ರಾಚಾರ್ಯರು, ಕ.ವಿ.ವಿ. ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಅಡಿಯಲ್ಲಿ ಸ್ನಾತಕೋತ್ತರ ಕೋರ್ಸುಗಳನ್ನು ನಡೆಸುತ್ತಿರುವ ಮಹಾವಿದ್ಯಾಲಯಗಳು (ಯಾದಿಯಂತೆ).**
7. **ನಿರ್ದೇಶಕರು, ಮಾಹಿತಿ ಮತ್ತು ತಂತ್ರಜ್ಞಾನ (I.T. Section) ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.(ಸದರ ಸುತ್ತೋಲೆಯನ್ನು ಕ.ವಿ.ವಿ ಅಂತರ್ಜಾಲದಲ್ಲಿ ಅಳವಡಿಸುವುದು.)**

**ಪ್ರತಿ ಸಾದರಪೂರ್ವಕವಾಗಿ:**

1. ಹಣಕಾಸು ಅಧಿಕಾರಿಗಳು, ಹಣಕಾಸು ವಿಭಾಗ, ಕ.ವಿ.ವಿ.ಧಾರವಾಡ.
2. ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಾರ್ಯಾಲಯ, ಕ.ವಿ.ವಿ. ಧಾರವಾಡ.
3. ಆಪ್ತ ಕಾರ್ಯದರ್ಶಿಗಳು, ಕುಲಸಚಿವರ ಕಾರ್ಯಾಲಯ, ಕ.ವಿ.ವಿ. ಧಾರವಾಡ.
4. ಆಪ್ತ ಕಾರ್ಯದರ್ಶಿಗಳು, ಕುಲಸಚಿವರ (ಮೌಲ್ಯಮಾಪನ) ಕಾರ್ಯಾಲಯ, ಕ.ವಿ.ವಿ. ಧಾರವಾಡ.